

ಹೆಡ್‌ನಾ ಕರೆದು ನಾಳೆಯಿಂದ ನೀನು ಆಫೀಸಿಗೆ ಕಾಲಿಡಬಾರ್ದು, ಅವನದು ಏನಿದೆಯೋ ಫೈನಲ್ ಸೆಟಲ್ಮೆಂಟ್ ಈಗಲೇ ಮಾಡಿ ಕಳಿಸಿ ಅಂದ್ರೂ... ಗುರೂ...''

ಶಿವುವಿಗೆ ಜೇಕೆ ಸರ್ ಟೇಬಲ್ ಮೇಲಿದ್ದ ಎರಡು ಲಕೋಟೆಗಳಲ್ಲಿ ತಪ್ಪು ಲಕೋಟೆ ಆರಿಸಿಕೊಂಡು ಹೋಗಿ ಕೊಟ್ಟಿದ್ದೇನೆಂಬುದು ಖಾತ್ರಿಯಾಯ್ತು. ಗಡಿಬಿಡಿಯಲ್ಲಿ ಯಾವುದು ತೆಗೆದುಕೊಂಡು ಹೋಗಬೇಕೆಂಬುದನ್ನು ಖಚಿತಪಡಿಸಿಕೊಳ್ಳದೇ ಅಚಾತುರ್ಯವಾಯ್ತು ಎಂದೆನಿಸಿತು.

''ಅಯ್ಯಯ್ಯೋ... ಏನ್ ಹೇಳತಾ ಇದೀಯಾ ನೀನು?...'' ಎಂದು ಶಿವು ತಡಬಡಿಸುತ್ತಿರುವಂತೆ ಫೋನ್ ಕಟ್ಟಾಯಿತು. ಪುನಃ ಹತ್ತಾರು ಸಲ ವಾಪಸ್ ಮಾಡಿದನಾದರೂ ಸಿಗ್ನಲ್ ಸಿಗಲಿಲ್ಲ. ಎದೆ ಡವಡವ ಹೊಡೆದುಕೊಳ್ಳತೊಡಗಿತು. ಏನು ಮಾಡಬೇಕೆಂದು ತಿಳಿಯದೇ ತಲೆ ಕೆಟ್ಟುಹೋಯಿತು. ನನಗೆ ಊಟ ಬೇಡವೆನ್ನುತ್ತಾ ಹೋಗಿ ಮಲಗಿಬಿಟ್ಟ. 'ಯಾಕೋ ಏನಾಯ್ತೋ' ಅಂತಾ ಎರಡು ಮೂರು ಬಾರಿ ಕೇಳಿದ ಸಾವಿತ್ರಮ್ಮ, ಅಪ್ಪನ ಸಮಾಧಿ ಕೆಲಸ ಮಾಡಿ ಬಂದು ಮನಸ್ಸು ಹದಗೆಟ್ಟಿರಬೇಕು ಎಂದುಕೊಂಡು ಸುಮ್ಮನಾದಳು.

ಬೆಳಗಾಗುತ್ತಲೇ, ಏನೋ ಜರೂರಿ ಕೆಲಸವಿದೆ ಎನ್ನುತ್ತಾ ಬೆಂಗಳೂರಿಗೆ ಹೊರಟ ಶಿವು. ದಾರಿಯುದ್ದ ಜೇಕೆ ಕಂಪನಿಯಲ್ಲಿ ಆರಂಭದಿಂದ ಇದುವರೆಗಿನ ಹತ್ತು ಹಲವು ಘಟನೆಗಳ ನೆನಪುಗಳೆಲ್ಲಾ ದಾಳಿಯಿಡತೊಡಗಿದವು. ರಸ್ತೆಯ ಮೇಲೆ ಬೈಕು ಓಡುತ್ತಿದ್ದರೆ, ಅದರ ಮೇಲೆ ಕುಳಿತ ಇವನ ಮೆದುಳು ಮತ್ತೆಲ್ಲೋ ಸಂಚಾರ ಮಾಡುತ್ತಿತ್ತು. 'ಇಲ್ಲ. ಜೇಕೆ ಸರ್ ನನ್ನನ್ನು ಕಂಪನಿಯಿಂದ ತೆಗೆದುಹಾಕಲು ಸಾಧ್ಯವೇ ಇಲ್ಲ. ಏನೋ ಮುಂಗೋಪದಲ್ಲಿ ಹಾಗೆ ಹೇಳಿದ್ದಾರೆ. ಅವರ ಕೋಪ ನಾನೆಷ್ಟು ಬಾರಿ ನೋಡಿಲ್ಲ. ಸೀದಾ ಅವರ ಮನೆಗೆ ಹೋಗಿ ತಪ್ಪಾಯ್ತು ಅಂತಾ ಕಾಲು ಹಿಡಿದುಕೊಂಡರೆ, ಪುನಃ ತೆಗೆದುಕೊಂಡೇ ತೆಗೆದುಕೊಳ್ಳುತ್ತಾರೆ' ಎಂದು ಮನಸ್ಸಿನಲ್ಲಿ ಹಲವುಬಾರಿ ಅಂದುಕೊಂಡ. ಜೊತೆಗೇ, ಒಂದುವೇಳೆ ಅವರು ಒಪ್ಪದೇ ಇದ್ರೆ, ತಾನು ಮುಂದೇನೇನೆಲ್ಲಾ ಮಾಡಬಹುದು, ಯಾವ್ಯಾವ ಆಯ್ಕೆಗಳಿವೆ ಎನ್ನುವ ವಿಚಾರವೂ ತಾನಾಗೇ ಬರತೊಡಗಿತು.

ಬೆಂಗಳೂರು ತಲುಪುವಷ್ಟರಲ್ಲಿ ಗಂಟೆ ಎಂಟಾಗಿತ್ತು. ಜೇಕೆ ಸರ್ ಮನೆಗೆ ಹೋಗುವ ದಾರಿಯಲ್ಲೇ ದೊಣ್ಣೆಚಂದ್ರುವಿನಿಂದ ಜಾಗ ಖರೀದಿ ಮಾಡಿ ಕಂಪನಿ ನಿರ್ಮಿಸಿದ ಕಟ್ಟಡ ಸಿಗುತ್ತದೆ. ಎರಡು ವರ್ಷಗಳೇ ಆಗಿರಬೇಕು ಈಗ. ಕಟ್ಟಡವನ್ನು ಬೇರೆ ಯಾವುದೋ ಐಟಿ ಸಂಸ್ಥೆಗೆ ಮಾರಿದ್ದಾರೆ. ಜೇಕೆ ಸರ್ ಮನೆಗೆ ಅಷ್ಟು ಬೇಗ ಹೋಗುವುದು ಸರಿ ಅಲ್ಲವಾದ್ದರಿಂದ, ಶಿವು ಅಲ್ಲೇ ಕಟ್ಟಡದ ಎದುರು ಫುಟ್‌ಪಾತಿನಲ್ಲಿದ್ದ ಗೂಡಂಗಡಿಯಲ್ಲಿ ನಿಂತ. ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಅಲ್ಲಿಯ ಕೆಲಸದವರಿಗೆಂದು ಹುಟ್ಟಿಕೊಂಡ ಗೂಡಂಗಡಿ ಇನ್ನೂ ಅಲ್ಲೇ, ಹಾಗೇ ಇದೆ. ಹೀಗಾಗಿ ಅಂಗಡಿಯಾತ ಶಿವುವಿಗೆ ಪರಿಚಯದವನೇ. "ನೋಡು, ಎಂಥಾ ಬಿಲ್ಡಿಂಗ್ ಎಬ್ಬಿ ನಿಲ್ಸೀದಿವಿ! ನಿನ್ ಅಂಗ್ಡಿ ಲೆವಲ್ಲೇ ಚೇಂಜ್ ಆಗೋಯ್ತು ಈಗ" ಎಂದ ಶಿವು. ಖುಷಿಯಲ್ಲಿದ್ದಿದ್ದರೆ ಮತ್ತೂ ಏನೇನು ಡೈಲಾಗುಗಳು ಬರುತ್ತಿದ್ದವೋ. ಹರಟಲು ಮನಸ್ಸಿರಲಿಲ್ಲ. ಹೊಟ್ಟೆಯಲ್ಲೊಂಥರಾ ತಳಮಳ. ಚಹ ಹೀರುತ್ತ ಕಟ್ಟಡವನ್ನೇ ನೋಡುತಿದ್ದ ಶಿವುವಿಗೆ ಹೀಗೇ ಒಮ್ಮೆಲೇ ಅಲ್ಲಿ ತಾನು ಸ್ಥಳಾಂತರಿಸಿದ ನಾರಾಯಣಪ್ಪನ ಸಮಾಧಿ ನೋಡಬೇಕೆನಿಸಿತು. ಆದಿನ ರಾತ್ರಿಯ ಪರದಾಟಗಳು, ಜೇನ್ನೊಣದೊಡನೆಯ ಸೆಣೆಸಾಟಗಳೆಲ್ಲಾ ನೆನಪಾಗುತ್ತಾ ಅದನ್ನೊಮ್ಮೆ ಕಂಡುಬರಬೇಕೆಂಬ ಒತ್ತಡ ಮನದಲ್ಲಿ ಹೆಚ್ಚಾಗತೊಡಗಿತು. ಚಹದ ಕಾಸಿನ ಚಿಲ್ಲರೆಯನ್ನೂ ಮರೆತು ಹಾಗೇ ಹೊರಟ.

ಕಟ್ಟಡದ ಗೇಟಿನಲ್ಲಿ ಸೆಕ್ಯುರಿಟಿ ಶಿವುವನ್ನು ತಡೆದ.

"ಇದು ನಮ್ಮ ಕಂಪನಿಯೇ ಕಟ್ಟಿದ ಬಿಲ್ಡಿಂಗು. ಬೇರೆಯವರಿಗೆ ಮಾರಿದ್ದೇವೆ" ಎನ್ನುತ್ತಾ ತನ್ನ ಐಡಿ ಕಾರ್ಡ್ ತೋರಿಸಿದ ಈತ.